



★ ಸಸಿತೋಟ



ಅಲಹಾಬಾದ್‌ನ ಕುಂಭಮೇಳದಲ್ಲಿ ಸಾಧುಗಳಿಗೇ ಅಗ್ರಸ್ಥಾನ. ಈ ಥೋಟಾ ಸಾಧುವಿನ ಸ್ಥಾನ ಇನ್ನೂ ಎತ್ತರ.. ಎತ್ತರ.. ಎನ್ನುವ ಹಾಗಿಲ್ಲ. 56ರ ಹರೆಯದ ದೇಹ ಇರುವುದೇ ಒಂದೂವರೆ ಅಡಿ. ಈ ಥೋಟು ತನ್ನಷ್ಟೇ ಉದ್ದದ ಚುಟ್ಟಾ ಸೇದುವುದರಲ್ಲಿ ನಿಸ್ಸೀಮನಂತೆ. ಆಹಾ, ಸಾಧುವಿನ ಸಾಧನೆಯೇ! ಮೂರ್ತಿ ಚಿಕ್ಕದಾದರೇನಂತೆ.. ಎನ್ನುವುದನ್ನು ಈ ರೀತಿ ಅರ್ಥ ಮಾಡಿಕೊಳ್ಳುವುದೇ?

ಒಬಾಮಗೂ ನೊಣಕ್ಕೂ ಬಿಡದ ನಂಟು ಎಂಬಂತೆ ಕಾಣುತ್ತದೆ. ಈಚೆಗೆ ಶ್ವೇತಭವನದ ಡೈನಿಂಗ್ ಹಾಲ್‌ನಲ್ಲಿ ಹಣಕಾಸು ನಿಯಂತ್ರಣ ಅಧಿಕಾರಿಗಳ ನೇಮಕವನ್ನು ಪ್ರಕಟಿಸುತ್ತಿದ್ದಾಗ ಗುಂಯ್ ಎಂದು ಹಿನ್ನೆಲೆ ಸಂಗೀತ ಬರಬೇಕೆ? ತಲೆ ಸುತ್ತ ಗಿರಕಿ ಹೊಡೆದು ಹಣೆ ಮೇಲೆ ಪವಡಿಸಿದ ನೊಣವನ್ನು ಒಬಾಮ ಕೈಬೀಸಿ ಆಚೆ ಓಡಿಸಿದರು. ಸದ್ಯ, 2009ರ ಟೀವಿ ಸಂದರ್ಶನದಲ್ಲಾದಂತೆ ನೊಣವನ್ನು ಹೊಡೆದು ಸಾಯಿಸಲಿಲ್ಲ. ಆಗ ಪ್ರಾಣಿ ದಯಾ ಸಂಘದವರು ಪ್ರತಿಭಟನೆ ನಡೆಸಿದ್ದು ಒಬಾಮ ಮರೆತಿಲ್ಲ ಎನಿಸುತ್ತದೆ. ಹೀಗಾಗಿ ನೊಣವೆಂದರೆ ಒಂಥರಾ ಪ್ರೀತಿ, ಭಯ.. ಎಲ್ಲಾ!



ಇಂಗ್ಲೆಂಡ್‌ನ ಕೆನ್ ವಿಲ್ಮನ್ ಬೀಚ್‌ನಲ್ಲಿ ನಾಯಿಯ ಜೊತೆ ಅಡ್ಡಾಡುತ್ತಿದ್ದಾಗ ನಾಯಿ ಕಲ್ಲಿನಂತೆ ಗೋಚರಿಸುತ್ತಿದ್ದ ಗುಪ್ಪೆಯ ಬಳಿ ಬೊಗಳತೊಡಗಿತು. ಕೋಲಿನಿಂದ ಕೆದರಿದ ವಿಲ್ಮನ್‌ಗೆ ಕೆಟ್ಟ ವಾಸನೆ ಬಂದು ಹಾಗೇ ಮನೆಗೆ ಮರಳಿದರೂ ಇಂಟರ್ನೆಟ್‌ನಲ್ಲಿ ತಡಕಾಡಿದನಂತೆ. ಆಗ ಸಿಕ್ಕಿದ್ದು ಅದು ತಿಮಿಂಗಲದ ವಾಂತಿ, ಸುಗಂಧದ್ರವ್ಯ ತಯಾರಿಕೆಯಲ್ಲಿ ಬಳಸುತ್ತಾರೆ ಎಂಬ ಮಾಹಿತಿ. ಈಗ ಆ ವಾಂತಿಗೆ ಒಂದು ಲಕ್ಷ ಪೌಂಡ್ ಬೆಲೆಯಂತೆ. ಲಾಟರಿ ಹೊಡೆಯುವುದೆಂದರೆ ಇದೇ ಇರಬೇಕು, ವಾಂತಿಯ ರೂಪದಲ್ಲಿ.

ಜಪಾನಿನಲ್ಲಿ ಜನ ಕೆಲಸದಲ್ಲಿ ಎಷ್ಟು ಮುಳುಗಿರುತ್ತಾರೆಂದರೆ ಹೆಂಡತಿಯ ಮೇಲಿನ ಪ್ರೀತಿ ಅರುಹಲೂ ಒಂದು ದಿನ ಮೀಸಲಿಡುವ ಪರಿಸ್ಥಿತಿ ಬಂದಿದೆಯಂತೆ. ಜನವರಿ 31ರಂದು ಪಾರ್ಕ್‌ನಲ್ಲಿ ಸೇರಿ ಪತ್ನಿಯ ಮೇಲಿನ ಪ್ರೇಮವನ್ನು ಕೂಗಿ ಹೇಳುತ್ತಾರಂತೆ. ಈ ಒಂದು ದಿನಕ್ಕಾಗಿ ವರ್ಷವಿಡೀ ಕಾಯುವ ಸಡಗರ ಪತ್ನಿಯರಿಗೆ.



ತೈವಾನ್ ರಾಜಧಾನಿ ತೈಪಿಯಲ್ಲಿ ಬಾರ್ಬಿ ಕೆಫೆ ಶುರುವಾಗಿದೆ. ಒಳಾಂಗಣ ಅಲಂಕಾರ, ಪರಿಚಾರಿಕೆಯರು.. ಎಲ್ಲವಕ್ಕೂ ಬಾರ್ಬಿಯಂತೆ ಅಲಂಕಾರ. ಕೊನೆಗೆ ಖಾದ್ಯಗಳು, ಕೇಕ್ ಕೂಡಾ ಬಾರ್ಬಿಯ ವೇಷ ಧರಿಸಿವೆ. ಗ್ರಾಹಕರಿಗೂ ಬಾರ್ಬಿ ದಿರಿಸು ತೊಡಿಸಿ ಖುಷಿಪಡುವ ಇರಾದೆ ಕೆಫೆ ಮಾಲೀಕರಿಗೆ ಬಂದಂತಿಲ್ಲ.



ಅಮೆರಿಕಾದ ನಯಾಗರಾ ಜಲಪಾತವನ್ನು ತಂತಿಯ ಮೇಲೆ ದಾಟಿದವ ಆಕಾಶಸಾಹಸಿ ಈ ನಿಕ್ ವಲೆಂಡಾ. ಈ ಬಾರಿ ಸರಸೋಟ ನಗರದಲ್ಲಿ 200 ಅಡಿ ಎತ್ತರದಲ್ಲಿ ಯಾವುದೇ ಸುರಕ್ಷತಾ ಕ್ರಮ ತೆಗೆದುಕೊಳ್ಳದೇ ಕಟ್ಟಡದಿಂದ ಕಟ್ಟಡಕ್ಕೆ ಓಡಾಡಿದ. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಎದುರು ಮನೆಗೆ ರಸ್ತೆ ದಾಟಬೇಕಾದರೇ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ. ನಮ್ಮ ನಗರಾಡಳಿತ ನಿಕ್‌ನನ್ನು ಕರೆಸಿ ನಾಗರಿಕರಿಗೆ ಆಕಾಶ ನಡಿಗೆಗೆ ತರಬೇತಿ ಕೊಡಿಸಬಹುದೇ?